ಅ. ರಾಜ್ಯದ ಎಲ್ಲ ಕಾಡಾಗಳ ವ್ಯಾಪ್ತಿಯಲ್ಲಿ ಇದುವರೆಗೂ ಸುಮಾರು 6432 ಕಿ.ಮೀ. ಉದ್ದದ ಅಚ್ಚುಕಟ್ಟು ರಸ್ತೆಗಳನ್ನು ನಿರ್ಮಿಸಲಾಗಿದೆ.

ಆ. ವರುಣಾ ನಾಲಾ ಅಚ್ಚುಕಟ್ಟಿನಲ್ಲಿ 3.3 ಕಿ.ಮೀ. ಉದ್ದದ ಅಚ್ಚುಕಟ್ಟು ರಸ್ತೆ ನಿರ್ಮಿಸಲಾಗಿದೆ.

ಇ. ಪ್ರಸ್ತುತ ಎಲ್ಲಾ ಕಾಡಾಗಳಲ್ಲಿರುವ 3708 ಕಿ.ಮೀ. ಉದ್ದದ ಅಚ್ಚುಕಟ್ಟು ರಸ್ತೆಗಳನ್ನು ಹಣಕಾಸು ಲಭ್ಯತೆಗೆ ಅನುಗುಣವಾಗಿ ಆದ್ಯತೆಯ ಮೇಲೆ ಮುಗಿಸಲಾಗುವುದು. ಈಗಿನ ಅಂದಾಜಿನ ಪ್ರಕಾರ ಸುಮಾರು ರೂ.9678 ಲಕ್ಷಗಳಷ್ಟು ಹಣ ಬೇಕಾಗುವುದು.

ಹಾರ್ನಳ್ಳಿ ರಾಮಸ್ವಾಮಿ ಆಯೋಗದ ವರದಿ.

3017(3516)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಹಾರ್ನಳ್ಳಿ ರಾಮಸ್ವಾಮಿ ಆಯೋಗ ನೀಡಿದ ವರದಿ ಮೇಲೆ ಆಡಳಿತ ಸುಧಾರಣೆಗೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ಈ ವರದಿಯ ಆಧಾರದ ಮೇಲೆ ಸರ್ಕಾರ ಆದೇಶವನ್ನು ಹೊರಡಿಸಿ ಜಾರಿಗೆ ಕೊಡಲಾಗಿದೆಯೇ? ಹಾಗಿದ್ದಲ್ಲಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ತರಲಾಗಿರುವ ಆಡಳಿತ ಸುಧಾರಣೆಯ ಕ್ರಮಗಳೇನು?

ಇ) ಬ್ರಿಟಿಷ್ ರಾಜ್ಯ ವ್ಯವಸ್ಥೆ ಶೇಕಡ 50ಕ್ಕೂ ಹೆಚ್ಚು ಭಾಗದಲ್ಲಿ ಮುಂದುವರಿಯುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದರೆ, ಈ ವ್ಯವಸ್ಥೆಯನ್ನು ಭಾರತೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಉ) ಮುಂದುವರೆದಿರುವ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯಿಂದ ಹಿಂದಿನ ಉಳಿಗಮಾನ್ಯ ಬ್ರಿಟಿಷ್ ವ್ಯವಸ್ಥೆಯನ್ನು ತೊಡೆದು ಹಾಕಿ ಇತ್ತೀಚಿನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ) ಆಡಳಿತ ಸುಧಾರಣಾ ಆಯೋಗವು ಸರ್ಕಾರಕ್ಕೆ ನೀಡಿರುವ ಮಧ್ಯಂತರ ವರದಿಯ ಶಿಫಾರಸ್ಸುಗಳನ್ನು ಸಂಬಂಧಿಸಿದ ಇಲಾಖೆಗಳು ಪರಿಶೀಲಿಸುತ್ತಿದೆ. ಅಲ್ಲದೆ ವರದಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಮಾನ್ಯ ಗ್ರಾಮೋಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ಸಹ ರಚಿಸಲಾಗಿದೆ.

ಆ) ಇಲ್ಲ.

ಇ ಮತ್ತು ಈ) ಆಡಳಿತ ಪದ್ಧತಿ ಸ್ಪಷ್ಟವಾಗಿ ಸ್ವದೇಶಿಯವಾಗಿದೆ. ಈ ಪದ್ಧತಿಯ ಸುಧಾರಣೆಯು ಮುಂದುವರಿಯುತ್ತಿರುವ ಪ್ರಕ್ರಿಯೆಯಾಗಿರುತ್ತದೆ.

ಉ) ಮಾಹಿತಿ ತಂತ್ರಜ್ಞಾನವನ್ನು ಸರ್ಕಾರದ ಬಹಳಷ್ಟು ಇಲಾಖೆಗಳಲ್ಲಿ/ ಸಂಸ್ಥೆಗಳಲ್ಲಿ ಅಳವಡಿಸಲಾಗಿದ್ದು ಅದರ ಕೆಲವು ಮುಖ್ಯವಾದ ಸೌಲಭ್ಯವೆಂದರೆ;

ಅ) ಗಣಕೀಕರಿಸಿದ ಹಕ್ಕುಪತ್ರಗಳ ವಿತರಣೆ

ಆ) ಬೆಂಗಳೂರಿನಲ್ಲಿ ಗಣಕೀಕರಿಸಿದ ವಾಹನ ಚಾಲಕರ ಪರವಾನಿಗೆಯ ಪಂಚಿಕೆ

ಇ) ಬೆಂಗಳೂರಿನಲ್ಲಿ ಗಣಕೀಕೃತ ಎಫ್ಐಆರ್ ದಾಖಲೆ

ಈ) ಹಲವಾರು ಇಲಾಖೆಗಳು ವೆಬ್‌ಸೈಟನ್ನು ಅಳವಡಿಸಿಕೊಂಡಿದೆ. ಇದರಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ಅಗತ್ಯ ಮಾಹಿತಿಗಳು ದೊರಕುತ್ತದೆ.

ಬೆಂಗಳೂರಿನ ಕಾಡು ಮಲ್ಲೇಶ್ವರಂ ದೇವಸ್ಥಾನದಲ್ಲಿನ ಬೆಲೆ ಬಾಳುವ ಜಾಗವನ್ನು ಖಾಸಗಿ ವ್ಯಕ್ತಿಗೆ ನೀಡಿರುವುದು.

3818(3517)

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೆಂಗಳೂರು ನಗರದ ಮಲ್ಲೇಶ್ವರಂ ಬಡಾವಣೆಯಲ್ಲಿರುವ ಶ್ರೀ ಕಾಡು